8. ಶಿಕ್ಷಕ–ಶಿಕ್ಷಕೇತರರ ಸಿಬ್ಬಂದಿಗಳಿಗೆ ಯೋಗ್ಯ ವೇತನ ನೀಡುವುದು.

† ಶ್ರೀ ಜಿ. ಎಸ್: ಆಚಾರ್ (ಬೈಂದೂರು)— ಮಾನ್ಯ ಅಧ್ಯಕ್ಷರೇ, ಕೇಂದ್ರ ಸರಕಾರದ ಯೋಜನೆಯಂತೆ ಕರ್ನಾಟಕ ರಾಜ್ಯದಲ್ಲಿ ಸಹ ವೃತ್ತಿ ಶಿಕ್ಷಣ ಕೋರ್ಸ್‌ಗಳು ೧೯೭೭ ರಿಂದ ಪ್ರಾರಂಭವಾಗಿ, ಸುಮಾರು ೨೫೦ಕ್ಕೂ ಮಿಕ್ಕಿದ ಸಂಸ್ಥೆಗಳಲ್ಲಿ ೩೦೦ಕ್ಕೂ ಮಿಕ್ಕಿದ ಕೋರ್ಸುಗಳನ್ನು ಸ್ವಯಂ ಉದ್ಯೋಗಕ್ಕೆ ನೆರವು, ಕರಕುಶಲತೆಯಂ ಬೆಳವಣಿಗೆಗೆ ಇವು ಸಹಕಾರಿಯಾಗಿವೆ. ಹತ್ತು ಪ್ಲಸ್ ಎರಡು ವರ್ಷದ ಪಿ.ಯು.ಸಿ. ಮಟ್ಟದಲ್ಲಿರುವ ಈ ಯೋಜನೆಗೆ ಪ್ರತ್ಯೇಕ ವೃತ್ತಿ ಶಿಕ್ಷಣ ನಿರ್ದೇಶನಾಲಯವಿದ್ದರೂ, ಯೋಜನೆ ಜಯಪ್ರಿಯವಾಗಿದ್ದಾಗ್ಯೂ ರಾಷ್ಟ್ರದಲ್ಲೇ ಕರ್ನಾಟಕದ ಪ್ರಗತಿ ಈ ದಿಸೆಯಲ್ಲಿ ಉತ್ತಮವಿದ್ದರೂ, ಈ ವೃತ್ತಿ ಶಿಕ್ಷಣದ, ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳಿಗೆ ಕೇಂದ್ರ ಸರಕಾರದ ಯೋಜನೆಯಂತೆ ಯೋಗ್ಯ ವೇತನ ಹಾಗೂ ಇತರ ಸೌಲಭ್ಯ ನೀಡಬೇಕಾಗಿದ್ದರೂ, ಹರಿಯಾಣ ಮೊದಲಾದ ರಾಜ್ಯಗಳು ಈಗಾಗಲೇ ನೀಡುತ್ತಿದ್ದರೂ ಕರ್ನಾಟಕದಲ್ಲಿ ಮಾತ್ರ ನೌಕರರ ಸ್ಥಿತಿಗತಿ ತ್ರಿಶಂಕು ಸ್ಥಿತಿಯಲ್ಲಿದೆ, ಆಪರಿಗೆ ಹುದ್ದೆ ಮತ್ತು ಆಯ್ಕೆ ನಿಯಮಗಳಾಗಿಲ್ಲ. ಪರಿಷ್ಕೃತ ವೇತನ ಶ್ರೇಣಿ ನೀಡಿಲ್ಲ, ತ್ರಿವಿಧ ಸೌಲಭ್ಯ, ವೇತನದ ಸಕಾಲಿಕ ಹೆಚ್ಚಳ ಇತರ ನೆರವು ನೀಡುತ್ತಿಲ್ಲ. ಪರಿಣಾಮವಾಗಿ ಕೇಂದ್ರದ ನೆರವನ್ನು ಸಹಾ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ರಾಜ್ಯ ಸರಕಾರ ವಿಫಲವಾಗಿದೆ, ವೃತ್ತಿ ಶಿಕ್ಷಣ ಇಲಾಖೆಯ ಮೇಲ್ಮನವಿ ಸಿಬ್ಬಂದಿಗಳನ್ನು ಖಾಯಂಗೊಳಿಸಿ, ಈ ಯೋಜನೆಯಲ್ಲಿ ನೇರವಾಗಿ ದುಡಿಯುವ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳನ್ನು ಹತ್ತು ವರ್ಷಗಳಿಂದಲೂ ಅತಂತ್ರ ಸ್ಥಿತಿಯಲ್ಲಿಟ್ಟಿರುವುದು ತೀರಾ ಶೋಚನೀಯ, ಯುವಕರ ಬದುಕಿಗೆ ಭರವಸೆ ನೀಡುವ ಯೋಜನೆಯಲ್ಲಿ ದುಡಿಯುವವರೆಲ್ಲರ ಸೇವೆಯನ್ನು ಖಾಯಂಗೊಳಿಸಿ ಇತರ ನೌಕರರಂತೇ ಪರಿಗಣಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಸಚಿವರು)—ಮಾನ್ಯ ಅಧ್ಯಕ್ಷರೇ, ೧೯೭೭-೭೮ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ನಿರ್ದೇಶನಾಲಯವನ್ನು ಈ ತಾತ್ಕಾಲಿಕ ಇಲಾಖೆಯಾಗಿ ಪ್ರಾರಂಭಿಸಲಾಗಿದ್ದು, ಕೋರ್ಸಿಗೆ ಬೇಕಾದಂಥ ಉಪನ್ಯಾಸಕರ ಹುದ್ದೆಗಳನ್ನು ಆಗತ್ಯಕ್ಕೆ ತಕ್ಕಂತೆ ನೇಮಿಸಿಕೊಳ್ಳಲಾಯಿತು. ಆದರೆ ಈ ಇಲಾಖೆಗೆ ವರ್ಗ ಮತ್ತು ನೇಮಕಾತಿ ನಿಯಮಗಳು ಇಲ್ಲದಿರುವುದರಿಂದಲೂ, ಮತ್ತು ಮಂಜೂರಾದ ಹುದ್ದೆಗಳು ಇಲ್ಲವಾದುದರಿಂದಲೂ ಹೆಚ್ಚು ವೃತ್ತಿ ಶಿಕ್ಷಣ ಕೋರ್ಸುಗಳನ್ನು ವಿದ್ಯಾರ್ಥಿಗಳು ಲಭ್ಯ ಇಲ್ಲದಿದ್ದಾಗ ಮುಂಚ್ಚಬೇಕಾದಂಥ ಪರಿಸ್ಥಿತಿ ಇರುವಾಗ ವೃತ್ತಿ ಶಿಕ್ಷಣ ಇಲಾಖೆಯ ಉಪನ್ಯಾಸಕರನ್ನು ಪೂರ್ಣಕಾಲೀನ ವೇತನದಲ್ಲಿ ಖಾಯಂಗೊಳಿಸಲು ಸಾಧ್ಯವಾಗಿರುವುದಿಲ್ಲ.

9 ಮಂಕಿ ಗ್ರಾಮಕ್ಕೆ ಕುಡಿಯೆಂಬ ನೀರು ಸರಬರಾಜು ಮಾಡುವುದು

† ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಹೊನ್ನಾವರ ತಾಲೂಕಿನ ಮಂಕಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಮಾಡಂತ್ತಿಲ್ಲದ ಬಗ್ಗೆ ಹಾಗೂ ಕೆಲಸ ಕಳಪೆ ಆದಬಗ್ಗೆ, ಕಳೆದ ಶಾಸನ ಸಭೆಯ ಅಧಿವೇಶನದಲ್ಲಿ ಲಕ್ಷ್ಯ ಸೆಳೆದಾಗ ಮಂಕಿ ಗ್ರಾಮಕ್ಕೆ ಸರಿಯಾದ ನೀರು ಸರಬರಾಜು ಆಗುತ್ತಿದೆ ಎಂದು ಮಾನ್ಯ ಮಂತ್ರಿಗಳಾದ ದೇಶಪಾಂಡೆಯವರು ತಿಳಿಸಿದರು. ಆದರೆ ನಾನೇ ಸ್ವತಃ ಹೋಗಿ ನೋಡಲಾಗಿ ಮಂಕಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲದ ಬಗ್ಗೆ ತಿಳಿಯಿತು. ಕಾರಣ ತಕ್ಷಣ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಸರಕಾರ ಹೇಳಿಕೆ ನೀಡಬೇಕೆಂದು ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಕುಡಿಯುವ ನೀರಿನ ಸೌಕರ್ಯಕ್ಕೆ ಸಂಬಂಧಪಟ್ಟಿದ್ದು. ಇದರ ಬಗ್ಗೆ ತೀವ್ರವಾಗಿ ಗಮನಹರಿಸಿ ನೀರಿನ ವ್ಯವಸ್ಥೆ ಮಾಡಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತೇನೆ. ಹಾಗೂ ಇದರ ಬಗ್ಗೆ ಪೂರ್ಣವಾದ ಉತ್ತರ ತರಿಸಿಕೊಡುತ್ತೇನೆ.